ಆ) ಲಗತ್ತಿಸಿರುವ ಪ್ರಕಾರ

ಇ) ಈ ವಿಷಯವು ನಗರ ಪ್ರದೇಶಕ್ಕೆ ಬರುತ್ತದೆ (ಬೆಳಗಾಂ ನಗರಪಾಲಿಕೆ).

ಈ) ಕೆಲಸವು ಪ್ರಾರಂಭವಾಗಿರುವುದಿಲ್ಲ.

SRI K C. MODGEKAR DESAI.—Regarding the number of days required to take up supply of water from Hidkal Dam Project. I have not received the reply from the Hon'ble Minister He has given reply that the matter pertains to urban areas in Belgaum City Corporation. The Corporation authorities and the Urban Water Supply Board have so far not fixed the ratio of water supply for domestic purpose and industrial purpose. Will the Government fix the ratio ? If so, what ratio the government is going to fix ?

SRI M. Y. GHORPADE.—The question is in how many days water will be supplied from Hidkal Dam Project to Belgaum City. It doesn't pertain to my Ministry.

ಹೆಗ್ಗಡದೇವನಕೋಟೆಯಲ್ಲಿ ಬೆಲೆಬಾಳುವ ಮರಗಳ ದುರುಪಯೋಗ

೩೫೮ ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೆಗ್ಗಡದೇವನ ಕೋಟೆ ತಾಲ್ಲೂಕು ಪೊಳಯೂರು ಕಾವಲ್ ಸ.ನಂ. ೩೧ ರಿಂದ ೪೧ ಜಮೀನಿನಲ್ಲಿರುವ ಮರಗಳನ್ನು ಕಡಿಯಲು ಪರವಾನಗಿ ಕೊಡದಿರುವುದರಿಂದ ಬೆಲೆ ಬಾಳುವ ಮರಗಳನ್ನು ಸಾಗಿಸುತ್ತಿರುವುದು ನಿಜವೆ ?

ಆ) ಹಾಗಿದ್ದಲ್ಲಿ ರೈತರು ದುರುಪಯೋಗದ ಬಗ್ಗೆ ಅರ್ಜಿ ಸಲ್ಲಿಸಿದ್ದರೂ ಅರಣ್ಯ ಇಲಾಖೆಯವರ ಕ್ರಮ ಕೈಗೊಳ್ಳದಿರುವುದು ನಿಜವೆ ?

ಇ) ಸಂಪೂರ್ಣ ತನಿಖೆಯಾಗುವವರೆಗೆ ಮರಗಳ ಸಾಗಾಣಿಕೆ ಪರ್ಮಿಟ್ ನೀಡದಿರಲು ಸರ್ಕಾರವು ಉದ್ದೇಶಿಸಿದೆಯೆ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ಮರಗಳನ್ನು ಕಡಿಯಲು ಕಾನೂನಿನ ಚೌಕಟ್ಟಿನೊಳಗೆ ಪರವಾನಗಿಯನ್ನು ನೀಡಲಾಗಿದೆ.

ಆ) ನಿಜವಲ್ಲ ದುರುಪಯೋಗದ ಬಗ್ಗೆ ಸತ್ಯಾಂಶಗಳು ಕಂಡುಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರಗಳನ್ನು ಓದಿಗಿಸಿದೆ ಎಂದು ಹೇಳುತ್ತಿದ್ದಾರೆ, ನನ್ನ ಒಂದನೆಯ ಪ್ರಶ್ನೆಗೆ ಮರಗಳನ್ನು ಕಡಿಯಲು ಕಾನೂನಿನ ಚೌಕಟ್ಟಿನೊಳಗೆ ಪರವಾನಗಿಯನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಕಾನೂನು ಚೌಕಟ್ಟಿನಲ್ಲಿ ಪರವಾನಗಿಯನ್ನು ಕೊಟ್ಟಿಲ್ಲ. ಮತ್ತು ನನ್ನ ಎರಡನೆಯ ಪ್ರಶ್ನೆಗೆ' ಹಾಗಿದ್ದಲ್ಲಿ ರೈತರು ದುರುಪಯೋಗದ ಬಗ್ಗೆ ಅರ್ಜಿ ಸಲ್ಲಿಸಿದ್ದರೂ ಅರಣ್ಯ ಇಲಾಖೆಯವರು ಕ್ರಮಕೈಗೊಳ್ಳದಿರುವುದು ನಿಜವೇ ? ಎಂದು ಕೇಳಿದ್ದಕ್ಕೆ'' ನಿಜವಲ್ಲ, ದುರುಪಯೋಗದ ಬಗ್ಗೆ ಸತ್ಯಾಂಶಗಳು ಕಂಡುಬಂದಿರುವುದಿಲ್ಲ ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ, ನಾನು ಒಂದು ಕಾಗದವನ್ನು ಡಿ.ಎಫ್.ಓ.ರವರಿಗೆ ಬರೆದೆ, ನನಗೆ ಡಿ.ಎಫ್.ಓ.ರವರು ಒಂದು ಪತ್ರವನ್ನು ಬರೆದಿದ್ದಾರೆ, ಆದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ೬೩,೯೫೫ರೂಪಾಯಿಗಳು ದುರುಪಯೋಗವಾಗಿದೆ ಎಂದು ಹೇಳಿದ್ದಾರೆ, ಅಷ್ಟು ಮರಗಳನ್ನು ಕಡಿಯುವುದಕ್ಕೆ ಈ ರೀತಿ ಲೈಸೆನ್ಸ್‌ನ್ನು ಕೊಟ್ಟಿದ್ದಾರೆ, ಮತ್ತೆ ೬೩೯೫೫ ರೂಪಾಯಿ ಗಳನ್ನು ಮರಗಳನ್ನು ಕಡಿದದ್ದಕ್ಕೆ ಸರ್ಕಾರಿ ವ್ಯಾಲ್ಯೂಯೇಷನ್ ಪ್ರಕಾರ ಕಟ್ಟಿಸಿಕೊಂಡಿದ್ದೇವೆ ಎಂದು ಹೇಳಿ ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಮತ್ತೆ ನಾನು ಅವರಿಗೆ ಪತ್ರ ಬರೆದಿದ್ದೇನೆ. ನಿಮ್ಮ ಪತ್ರ ತಲುಪಿದೆ, ನೀವು ೬೩,೯೫೫ ರೂಪಾಯಿಗಳನ್ನು ಮರ ಕಡಿದದ್ದಕ್ಕೆ ಕಟ್ಟಿಸಿಕೊಂಡಿದ್ದೀರಿ ಎಂದು

ಹೇಳುತ್ತಿದ್ದೀರಿ. ಇದು ಸಂಪೂರ್ಣವಾಗಿ ತನಿಖೆಯಾಗಂವವರೆಗೂ ಮರಗಳನ್ನು ಸಾಗಾಣಿಕೆ ಮಾಡುವುದಕ್ಕೆ ಬಿಡಬೇಡಿ ಎಂದು ನಾನು ೩೦ನೇ ತಾರೀಖು ಪತ್ರವನ್ನು ಬರೆದೆ. ಈ ರೀತಿ ಹಣ ಪನ್ನು ಕಟ್ಟಿಸಿಕೊಂಡಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಹೆಗ್ಗಡದೇವನಕೋಟೆ ಮೊಳೆಯೂರು ಕಾವಲ್, ಮತ್ತೆ ಚಂಬೀಪುರ ಗ್ರಾಮಗಳ ಸರ್ವೆ ನಂ, ೩೧-೪೧ರಲ್ಲಿ ಇರತಕ್ಕಂಥಾದ್ದು ಖಾಸಗಿ ಆಸ್ತಿ. ಅದರಲ್ಲಿ ಮಾಫಿ ಪಾಸ್ ಮಾಡಬೇಕು ಎಂದಂ ಆ ಮಾಲೀಕರು ಕೇಳಿದರು. ಅವರ ಪವರ್ ಆಫ್ ಅಟಾರ್ನಿ ಹೋಲ್ಡರ್ ಕೂಡ ಕೇಳಿದ್ದಾರೆ. ಇದರ ಪ್ರಕಾರ ನಮ್ಮ ಸರ್ಕಾರದವರು ಕ್ರಮ ತೆಗೆದುಕೊಂಡು ಅವರಿಗೆ ಮಾಫಿ ಪಾಸ್ ಕೊಟ್ಟಿದ್ದಾರೆ. ಈಗ ಮಾನ್ಯ ಸದಸ್ಯರು ೧೨-೪-೯೦ ವತ್ತೆ ೩೦-೪-೯೦ರ ದಿವಸ ಪ್ರೊಟೆಸ್ಟ್ ಮಾಡಿಬಿಟ್ಟು ಇವರ ಕಂದಾಯದ ಜಮೀನು ಏನಿದೆ ಅದರ ಹೊರತಾಗಿ ಮರಗಳನ್ನು ಕಡಿಯುತ್ತಾ ಇದ್ದಾರೆ. ಅದು ಸರಿಯಲ್ಲ ತನಿಖೆ ಮಾಡಬೇಕು ಎಂದು ಹೇಳಿದ್ದಾರೆ. ತನಿಖೆ ಮಾಡಿದರು, ತನಿಖೆಯಲ್ಲಿ ರಿಸರ್ವ್ ಫಾರೆಸ್ಟ್‌ನಲ್ಲಿ ಯಾವುದೂ ಇಲ್ಲ ಎಂದು ನಾವು ಹೇಳಿದ್ದೇವೆ. ಹಣ ಕಟ್ಟಿಸಿಕೊಂಡಿರುವುದು ಅದು under objection the party has given the money. If it is proved that it is not government property then we will take money and confiscate the goods.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಸಭಾಧ್ಯಕ್ಷರೆ, ಸ್ವಂತ ಜಮೀನು ಇದ್ದರೂ ಸಹ ಕರಾಬ್ ಜಮೀನು ಎಂದು ಇರುತ್ತದೆ. ಖರಾಬ್ ಜಮೀನು ಸರ್ಕಾರಿ ಜಮೀನು ಇದ್ದ ಹಾಗೆ. ಸ್ವಂತ ಜಮೀನು ಇದ್ದರೂ ಕೂಡ ಅಲ್ಲಿ ದರಖಾಸ್ತು ಮಾಡುವಾಗ ಖರಾಬ್ ಜಮೀನು ಎಂದು ಇರುತ್ತದೆ. ಖರಾಬ್ ಜಮೀನು ಸರ್ಕಾರದ್ದು. ಅವರ ಜಮೀನಾಗಿದ್ದರೆ ಇವರು ಏಕೆ ೬೩ ಸಾವಿರ ರೂಪಾಯಿ ಗಳನ್ನು ಕಟ್ಟಿಸಿಕೊಂಡರು ? ಖರಾಬ್ ಜಮೀನು ಸರ್ಕಾರದ್ದು ಎಂದು ಆದ ಮೇಲೆ...

ಅಧ್ಯಕ್ಷರು.—ಪ್ರಶ್ನೋತ್ತರ ಕಾಲದಲ್ಲಿ you can only elicit information from the government. You cannot go on asking elaborate questions on that.

ಶ್ರೀ ಎಂ.ಪಿ. ವೆಂಕಟೇಶ್.—ನಾನು ದುರುಪಯೋಗದ ಬಗ್ಗೆ ಹೇಳುತ್ತಾ ಇದ್ದೇನೆ. ಹಣ ಕಟ್ಟಿಸಿಕೊಂಡಿದ್ದಾರೆ, ದುರುಪಯೋಗ ಇದು. ಉತ್ತರದಲ್ಲಿ ೪೦೦ ಎಕರೆ ಅವರು ಕೇಳುವುದು ಬಂತೇನು ? ನೀವು ಸಂಪೂರ್ಣವಾಗಿ ತನಿಖೆ ಮಾಡಿ. ಅವರು ಸಾವಿರಾರು ಮರಗಳನ್ನು ಕಡಿದು ಸಾಗಾಣಿಕೆ ಮಾಡಿದ್ದಾರೆ.

ಅಧ್ಯಕ್ಷರು.—ನೀವು ತನಿಖೆ ಮಾಡಿ ಎಂದು ಹೇಳುತ್ತೀರಿ, ಅವರು ತನಿಖೆ ಮಾಡಿದ್ದೇನೆ ಎಂದಂತೆ ಹೇಳುತ್ತಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಇವರ ಜಮೀನಿನ ಪಕ್ಕದಲ್ಲಿ ಸಾವಿರಾರು ಮರಗಳನ್ನು ಕತ್ತರಿಸಿದ ಬುಡಗಳಿವೆ ಎಂದು ರೈತರು ಹೇಳುತ್ತಾ ಇದ್ದಾರೆ. ಅವರು ತಪ್ಪು ಮಾಡಿ ೬೩ ಸಾವಿರ ರೂಪಾಯಿ ಅವರ ಸ್ವಂತ ಜಮೀನಿಗೆ ಕಟ್ಟಿರುವಾಗ ಪಕ್ಕದ ಕಾಡಿನಲ್ಲಿ ಅವರು ಏಕೆ ಮರಗಳನ್ನು ಕಡಿದಿರಬಾರದು. ಅದಕ್ಕಾಗಿ ನಾನು ಕೇಳುತ್ತಾ ಇರತಕ್ಕಂಥಾದ್ದು. ಅವರು ಒಂದೇ ದಿವಸದಲ್ಲಿ ಕಡಿದಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಮಾನ್ಯ ಸದಸ್ಯರ ದೂರುಗಳ ಮೇಲೆ ಈಗ ಅದನ್ನು ವಿಲ್ಲಿಸಿದ್ದೆವು. ನಿಲ್ಲಿಸಿದ ಮೇಲೆ ಅವರು ದುಡ್ಡು ಕೊಟ್ಟಿದ್ದಾರೆ, ಅದನ್ನು ವಾಪಸ್ ಕೊಡ ಬೇಕಾಗುತ್ತದೆ. ಅದು ಸರ್ಕಾರಿ ಜಮೀನು ಅಲ್ಲ ಎಂದು ಅವರು ಹೇಳಿದ್ದಾರೆ. ಮಾಫಿ ಪಾಸ್ ತೆಗೆದುಕೊಳ್ಳುವ ಜನ ಕರ್ನಾಟಕದಲ್ಲಿ ಯಥೇಚ್ಚವಾಗಿದ್ದಾರೆ. ನಮ್ಮ ಖಾಸಗೀ ಜಮೀನಿನಲ್ಲಿ ಮರ ಗಳಿವೆ ಎಂದು ಮಾಫಿ ಪಾಸ್ ಪಡೆಯುವುದು, ಕಾಡಿನಲ್ಲಿರುವುದನ್ನೂ ಸೇರಿಸಿಕೊಂಡು ಸಾಗಿಸುವುದು. ಇವರೆಲ್ಲ ಬಹಳ ಜನ ಇದ್ದಾರೆ. ಇದನ್ನೆಲ್ಲಾ ಸ್ವಲ್ಪ ತನಿಖೆ ಮಾಡುತ್ತಾ ಇದ್ದೇವೆ, ತನಿಖೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಮಾಫಿ ಪಾಸ್ ಕೊಡಬೇಕಾಗಿದ್ದರೆ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು ಮೊದಲೇ ಸ್ಥಳವನ್ನು ತನಿಖೆ ಮಾಡುತ್ತಾರೆ. ಅದರ ಒಂದು ಸ್ಕೆಚ್ ಕೂಡ ಮಾಡುತ್ತಾರೆ. ಮತ್ತೆ ದೊಡ್ಡ ದೊಡ್ಡ ಮರಗಳಿದ್ದರೆ ಅವಕ್ಕೆ ನಂಬರಿಂಗ್ ಕೂಡ ಮಾಡುತ್ತಾರೆ. ಇಷ್ಟೆಲ್ಲಾ ಮಾಫಿ ಪಾಸ್ ಕೊಡುವುದಕ್ಕೆ ಮಾಡತಕ್ಕಂಥ ಪ್ರೊಸೀಜರ್ ಇದ್ದರೂ ಕೂಡ, ಈಗ ನೀವು ೬೩ ಸಾವಿರ ರೂಪಾಯಿ ಕಟ್ಟಿಸಿಕೊಂಡಿದ್ದೀರಿ. ಇದಕ್ಕೆ ಕಾರಣವೇನು? ಸ್ವಲ್ಪ ದಯವಿಟ್ಟು ತಾವು ಯೋಚನೆ ಮಾಡಿ

ತಾವೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಇದೆ. ಏಕೆಂದರೆ, ಇದು ಅರಣ್ಯ ಸಂಪತ್ತು ಲೂಟಿಯಾಗುತ್ತಾ ಇರತಕ್ಕಂಥಾದ್ದು. ಅರಣ್ಯ ಸಂಪತ್ತನ್ನು ರಕ್ಷಣೆ ಮಾಡುವುದರಲ್ಲಿ ತಾವು ಬಹಳ ಕಾಳಜಿ ವಹಿಸುತ್ತಿದ್ದೀರಿ, ಸಂತೋಷ. ಇದಕ್ಕೆ ನಾವು ಸಲಹೆ ಕೊಡುತ್ತಾ ಇದ್ದೇವೆ. ತಾವು ಖುದ್ದಾಗಿ ನೋಡಿ. ಸರಿಯಾದಂಥ ಅಧಿಕಾರಿಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ ನೋಡಿ. ಮತ್ತು ಇದರಲ್ಲಿ ಏನೊ ನಡೆದಿದೆ, ನಡೆಯದೇ ಇದ್ದರೆ ೬೩ ಸಾವಿರ ರೂಪಾಯಿ ಏಕೆ ಕಟ್ಟಿಸಿಕೊಂಡರು, ೬೩ ಸಾವಿರ ರೂಪಾಯಿ ಸಣ್ಣ ಮೊತ್ತವೇನಲ್ಲ, ೬೩ ಸಾವಿರ ರೂಪಾಯಿ ದೊಡ್ಡ ಮೊತ್ತ. ಇದನ್ನು ಕಟ್ಟಬೇಕಾಗಿದ್ದರೆ ಕಾರಣವಿದೆ. ಮತ್ತು, ನಾನು ಮೊದಲೇ ಹೇಳಿದಹಾಗೆ, ಈ ಮಾಫಿ ಪಾಸ್ ಕೊಡುವುದಕ್ಕೆ ಮೊದಲೇ ದಾಖಲೆಯಲ್ಲಿ ನಮೂದಿಸಿರುತ್ತಾರೆ, ಇದನ್ನು ದಯವಿಟ್ಟು ತಾವು ತನಿಖೆ ಮಾಡಬೇಕು.

ಅಧ್ಯಕ್ಷರು.—ಅದನ್ನು ಪರಿಶೀಲನೆ ಮಾಡುತ್ತಾರೆ. ಯು.ಕೆ. ಶಾಮಣ್ಣ,

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೆ, ಒಂದು ನಿಮಿಷ,

ಅಧ್ಯಕ್ಷರು.—ಯು. ಕೆ. ಶಾಮಣ್ಣ, ಕೊಶ್ಚನ್ ನಂಬರ್ ೩೫೪.

ಶ್ರೀ ಎಂ. ಪಿ. ವೆಂಕಟೇಶ್,—ಇವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳದೇ ಇದ್ದರೆ ಇವರಿಂದ ಬೇರೆಯವರಿಗೆ ಜಮೀನು ಮಾರಿಬಿಟ್ಟು ಕೇರಳಕ್ಕೆ ಹೊರಟು ಹೋಗುತ್ತಾರೆ.

ಅಧ್ಯಕ್ಷರು.—ನಾನು ಶ್ರೀ ಶಾಮಣ್ಣ ಅವರನ್ನು ಕರೆದಿದ್ದೇನೆ.

ಶ್ರೀ ಯು. ಕೆ. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ನಾನು ೧೦೬೩ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್,—ನಿಧಾನವಾದರೆ ಈ ಜಮೀನು ಮಾಲೀಕರು ಜಮೀನು ಮಾರಿ ಕೇರಳಕ್ಕೆ ಹೋಗುತ್ತಾರೆ. ಇದು ಬಹಳ ಮುಖ್ಯವಾದ ಪ್ರಶ್ನೆ,

MR. SPEARKER.—That is left to him. Rules are there. He can exercise his right as a Member of this House. ಈ ಸದನದಲ್ಲಿ ಬರುವ ಪ್ರತಿಯೊಂದು ಪ್ರಶ್ನೆಯೂ ಮುಖ್ಯವೇ.

ಕರ್ನಾಟಕ ಭೂ ಸೇನಾ ನಿಗಮದಿಂದ ಕಳಪೆ ಮನೆಗಳ ನಿರ್ಮಾಣ

೧೦೬೩. ಶ್ರೀ ಯು. ಕೆ. ಶಾಮಣ್ಣ (ಶೃಂಗೇರಿ).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಮಂತ್ರಿ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಲವು ನಿರ್ಮಾಣ ಕಾರ್ಯಗಳನ್ನು ಭೂ ಸೇನಾ ವಹಿಸಿರುವುದು ನಿಜವೇ ?

ಆ) ಈ ಕಾರ್ಯಗಳು ಅಸಮರ್ಪಕವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ನಿಗಮವು ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕಿನಲ್ಲಿ ಕಟ್ಟಿರುವ ಬಹುತೇಕ ಮನೆಗಳು ಶೌಚಾಲಯಗಳು, ಕಳಪೆ ಮಟ್ಟದಾಗಿದ್ದು ಹಾಗೂ ಅವುಗಳು ಬಿದ್ದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಚಿಕ್ಕಮಗಳೂರು ಜಿಲ್ಲಾ ಪರಿಷತ್‌ನವರು ಕೆಲವು ದೂರುಗಳು ನೀಡಿರುವುದು ಈಗ ಸರ್ಕಾರದ ಗಮನಕ್ಕೆ ಬಂದಿದೆ.

ಈ) ಕರ್ನಾಟಕ ಭೂಸೇನಾ ನಿಗಮದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.